CONTINUATION OF THE POSTS OF POLICE AND REVENUE PATELS

301. Sri B. G. BANAKAR (Hirekerur).—

Will the Minister for Revenue be pleased to state :—

(a) whether the Government intends to continue the posts and services of Police and Revenue Patels in the Villages of all the Revenue Divisions in the State ;

(b) if so, the powers and functions entrusted too them and the monthly salary or remuneration fixed and paid to them ;

(c) whether any assistance of inferior servants like Walikar, Talwar or Madig will be given to these village Patels as was given in the past ;

(d) the measures taken to continue the posts like Patels, Walikars of Talwars or Setsanadies in villages in the State ?

Sri N. HUTCHAMASTHY GOWDA (Minister for Revenue).—

(a) Yes.

(b) The Patels have to assist the Village Accountants in the matter of collection of Land Revenue Arrears and other Government dues. They have also to render such assistance as may be required by the local police in the discharge of their duties. They are being paid the same remuneration as they were receiving before abolition of the hereditary offices of Patels.

(c) Yes.

(d) The posts of Patels and Minor Village Servants have been continued from time to time and sanction has been accorded for the further continuance of these posts upto 31st December 1974 or till the Land Revenue (Amendment) Bill providing for appointment of Patels and Minor Village Servants is passed whichever is earlier.

ಶ್ರೀ ಬಿ. ಜಿ. ಬಣಕಾರ್.—ಮೈಸೂರು ಪೋಲೀಸ್ ಆಕ್ಟ್ 1963, ಇದು ತಾರೀಖು 2-4—1965ರಲ್ಲಿ ಜಾರಿಗೆ ಬಂದಿದೆ. ಈ ಕಾಯಿದೆಯಲ್ಲಿ ಸೆಕ್ಷನ್ 129 ರಿಂದ ಹಿಡಿದು 143ರವರೆಗೆ ಗ್ರಾಮಗಳಲ್ಲಿ ಪೋಲೀಸ್ ಹಾಗೂ ಕಂದಾಯ ಪಟೇಲರುಗಳನ್ನು ನೇಮಕ ಮಾಡುವುದಕ್ಕೆ ಮತ್ತು ಅವರ ಅಧೀನದಲ್ಲಿ ಕೆಲಸ ಮಾಡುವವರನ್ನು ನೇಮಕ ಮಾಡುವುದಕ್ಕೆ ಅವಕಾಶವಿದೆ. ಮತ್ತು ಅವರುಗಳು ಮಾಡತಕ್ಕಂಥ ಕೆಲಸಗಳ ಬಗ್ಗೆ ಸಹ ಅದರಲ್ಲಿ ಉಲ್ಲೇಖ ವಿದೆ. ಆದರೆ ಈ ಆಕ್ಟ್‌ನ್ನು ಇಲ್ಲಿಯವರೆಗೆ ಜಾರಿಗೆ ಕೊಟ್ಟಿಲ್ಲ; ಇದನ್ನು ಆದಷ್ಟು ತೀವ್ರವಾಗಿ ಜಾರಿಗೆ ಕೊಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಭೆಯ ಮುಂದೆ ರ್ಯಾಂಡ್ ರೆವಿನ್ಯೂ ಆಕ್ಟ್‌ನ ತಿದ್ದುಪಡಿ ಬರುವುದಿದೆ. ಅದರಲ್ಲಿ ಇವರುಗಳನ್ನು ಯಾವ ರೀತಿ ನೇಮಕ ಮಾಡಬೇಕು, ಇವರುಗಳಿಗೆ ಯಾವ ರೀತಿಯ ಸಂಬಳ ಕೊಡಬೇಕು ಎಂಬ ವಿಚಾರ ಸರ್ಕಾರದ ಮುಂದೆ ಇದೆ. ಅಲ್ಲಿಯವರೆಗೆ ಈಗ ಇರತಕ್ಕಂಥ ರೀತಿಯಲ್ಲಿಯೇ ಮುಂದುವರೆಸಿಕೊಂಡು ಹೋಗಬೇಕಾಗಿದೆ. ಆ ಆಕ್ಟ್ ಜಾರಿಗೆ ಬಂದಮೇಲೆ ಅದಕ್ಕೆ ಬೇಕಾದ ರೂಲ್ಸ್‌ನ್ನು ಮಾಡಲಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—ಗ್ರಾಮಾಂತರ ಪ್ರದೇಶಗಳಲ್ಲಿ ಪೋಲೀಸ್ ಹಾಗೂ ಕಂದಾಯ ಪಟೇಲರುಗಳ ಕೆಲಸ ಬಹಳ ಮಹತ್ವದ್ದಾಗಿದೆ. ಇವರುಗಳು ಕಂದಾಯವನ್ನು ವಸೂಲಿ ಮಾಡುವುದಲ್ಲದೆ, ಇನ್ನೂ ಅನೇಕ ಸರ್ಕಾರೀ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ಇಂದು ತಲಾಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ; ಈ ಕಾರಣದಿಂದ ಇವರಿಂದ ಸರಿಯಾಗಿ ಕೆಲಸ ಮಾಡಿಸಲು ಪೋಲೀಸ್ ಹಾಗೂ ಕಂದಾಯ ಪಟೇಲರುಗಳಿಗೆ ಹೆಚ್ಚಿನ ಅಧಿಕಾರ ಮತ್ತು ಹೆಚ್ಚಿನ ಸಂಬಳ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಸೂದಾ ಕಾನೂನು ಈ ಸಭೆಯ ಮುಂದೆ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಡ ತಾರೋ, ಅದನ್ನೆಲ್ಲಾ ದೃಷ್ಟಿಯಲ್ಲಿಟ್ಟುಕೊಂಡು, ಮುಂದೆ ಇವರನ್ನು ನೇಮಕ ಮಾಡುವಾಗ ಇವರಿಗೆ ಎಷ್ಟು ಅಧಿಕಾರ ಇರಬೇಕು, ಎಷ್ಟು ಸಂಬಳ ಇರಬೇಕು ಎಂಬ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ.—ಪೋಲೀಸ್ ಪಟೇಲರ ಹುದ್ದೆಗಳನ್ನು ಮುಂದುವರೆಸುತ್ತೀವೆಂದು ಹೇಳುತ್ತೀರಿ : ಈಗ ಇವರುಗಳಿಗೆ ವರ್ಷಕ್ಕೆ 10 ರಿಂದ 30 ರೂಪಾಯಿಗಳವರೆಗೆ ಪೋಟಿಗೆ ಸಿಗುತ್ತಿದೆ. ಇದು ಬಹಳ ಹಿಂದೆ ನಿಗದಿ ಮಾಡಿದ್ದು ; ಇದನ್ನು ಜಾಸ್ತಿ ಮಾಡುತ್ತೀರಾ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಳ್ಳಾರಿ ಜಿಲ್ಲೆಯಲ್ಲಿ ಇವರಿಗೆ ತಿಂಗಳ ಸಂಬಳ ಕೊಡಲಾಗುತ್ತಿದೆ. ಮತ್ತೆ ಕೆಲವು ಭಾಗಗಳಲ್ಲಿ ವರ್ಷಕ್ಕೆ ಒಂದು ಸಲ ಪೋಟೀಗೆ ಎಂದು ಕೊಡಲಾಗುತ್ತಿದೆ. ಈ ರೀತಿ ಎರಡು ಮೂರು ರೀತಿ ಇದೆ. ಇದನ್ನೆಲ್ಲಾ ಏಕರೂಪಕ್ಕೆ ತರಲು ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಪೋಟಿಗೆ ಸೂಕ್ತವೇ ಅಥವಾ ತಿಂಗಳ ಸಂಬಳ ಸೂಕ್ತವೇ, ತಿಂಗಳ ಸಂಬಳವಾದರೆ ಎಷ್ಟು ಕೊಡಬೇಕು ಎಂಬ ಬಗ್ಗೆ ಒಂದನ್ನು ಜಾರಿಗೆ ತರುವಾಗ ತೀರ್ಮಾನ ಮಾಡಬೇಕಾಗುತ್ತದೆ.

ಶ್ರೀ ಎನ್. ಜಿ. ಹಾಲಪ್ಪ.—ಪೋಲೀಸ್ ಹಾಗೂ ಕಂದಾಯ ಪಟೇಲರುಗಳು 'ಊರು ಕಾದು ದೊಡ್ಡಬೋರೇಗೌಡ ಎನಿಸಿಕೊಂಡು' ಎಂಬಂತೆ ಇಂದು ಸರ್ಕಾರದ ಅನೇಕ ಕೆಲಸಗಳನ್ನು ಮಾಡುತ್ತಿದ್ದಾರೆ. ಕಂದಾಯ ವಸೂಲಿ ಮಾಡುತ್ತಿದ್ದಾರೆ. ಆದರೆ ಇವರಿಗೆ ತಿಂಗಳ ಸಂಬಳ ಕೊಡುತ್ತಿಲ್ಲ ವಿಲೇಜ್ ಅಕೌಂಟೆಂಟರಿಗೆ ಮಾತ್ರ ತಿಂಗಳ ಸಂಬಳ ಕೊಡುತ್ತಿದ್ದೀರಿ ; ತಮಗೂ ಸಂಬಳ ಕೊಡಬೇಕೆಂದು ಇವರು ರೆಪ್ರಸೆಂಟೇಷನ್ ಕೊಟ್ಟಿಲ್ಲವೇ ? ಅದನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ನಾವೆಲ್ಲರೂ ಅದೇ ವರ್ಗಕ್ಕೆ ಸೇರಿದವರಾಗಿದ್ದೇವೆ. ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ನಮ್ಮೆಲ್ಲರಿಗೂ ಆ ಬಿರುದು ಇದೆ. ಇಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಅಧಿಕಾರ ಕೊಡಬೇಕು, ಎಷ್ಟೆಷ್ಟು ಸಂಬಳ ಕೊಡಬೇಕು ಎಂಬುದನ್ನು ಯೋಚನೆ ಮಾಡಿ ತೀರ್ಮಾನ ಮಾಡಬೇಕಾಗುತ್ತದೆ. ಈ ಬಗ್ಗೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನ ಮಸುದಾ ಕಾನೂನು ಸಭೆಯ ಮುಂದೆ ಬಂದಾಗ ಮಾನ್ಯ ಸದಸ್ಯರು ಸಲಹೆಗಳನ್ನು ಕೊಡುತ್ತಾರೆಂದು ನಂಬಿದ್ದೇನೆ. ಪೋಲೀಸ್ ಪಟೇಲರ ಹುದ್ದೆಗಳನ್ನು ಮುಂದುವರೆಸಬೇಕು ಎಂಬ ಉದ್ದೇಶ ಅನೇಕ ಸದಸ್ಯರಿಗೆ ಇದೆ. ಈಗ ನಾವು ಹಿಂದೆ ಇದ್ದ ಶಾನುಭೋಗರನ್ನು ತೆಗೆದು ಅವರ ಜಾಗಕ್ಕೆ ವಿಲೇಜ್ ಅಕೌಂಟೆಂಟರನ್ನು ಹಾಕಿದ ಮೇಲೆ ಏನು ವ್ಯತ್ಯಾಸವಾಗಿದೆ, ಕೆಲಸಕಾರ್ಯಗಳು ಯಾವ ರೀತಿ ಅಸ್ತವ್ಯಸ್ತವಾಗಿದೆ ಎಂಬುದು ಸಹ ಸರ್ಕಾರದ ಅನುಭವಕ್ಕೆ ಬಂದಿದೆ. ಆದಕಾರಣ ಇವರುಗಳನ್ನು ಮುಂದುವರೆಸುವ ಬಗ್ಗೆ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಡುತ್ತಾರೊ ಅದೆಲ್ಲವನ್ನೂ ನಾವು ದೃಷ್ಟಿಯಲ್ಲಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—ತಿದ್ದುಪಡಿ ಮಸೂದೆಯನ್ನು ಈ ಅಧಿವೇಶನದಲ್ಲಿಯೇ ತರುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತರುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.